**ಓ ಎಸ್ ನಂಃ 300-18**
**ಪಿ ಡಬ್ಲ್ಯೂ ಃ 1**

**ದಿಃ 04-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಮುಂದುವರೆದ **ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ**

2 ನೇ ಪ್ರತಿವಾದಿ ನನ್ನ ಕಡೆಯಿಂದ 10 ಲಕ್ಷ ರೂ ಸಾಲ ಪಡೆದಿದ್ದು ಅದರಲ್ಲಿ 4 ಲಕ್ಕ ರೂಗಳನ್ನು ನನ್ನ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 4 ಲಕ್ಷ ರೂ ಹಣದಲ್ಲಿ ನಾನು 2 ನೇ ಪ್ರತಿವಾದಿ ಕಡೆಯಿಂದ 2 ಲಕ್ಷ ರೂ ನಗದು ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಉಳಿಕೆ 2 ಲಕ್ಷ ರೂ ಹಣ ನನ್ನ ಹೆಂಡತಿರವರ ಬ್ಯಾಂಕ್ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ನನ್ನ ಹೆಂಡತಿಯ ಬ್ಯಾಂಕ್ ಖಾತೆ ಪಾಸ್ ಬುಕ್ ನ್ನು ಹಾಜರುಪಡಿಸಿರುತ್ತೇನಾ ಎಂದರೆ ಅದನ್ನು ಅವರು ಕೊಡುವುದಿಲ್ಲ ಎಂದು ಹೇಳುತ್ತಾರೆ. ನಾನು ಒಂದು ವೇಳೆ ನನ್ನ ಹೆಂಡತಿಯ ಬ್ಯಾಂಕ್ ಖಾತೆ ನಂಬರ್ ಓದಿ ಹೇಳಿದರೆ ನನ್ನ ಹೆಂಡತಿಯ ಬ್ಯಾಂಕ್ ಖಾತೆಗೆ ಸಂಬಂದಿಸಿರುತ್ತೆದೆಯೋ ಇಲ್ಲವೋ ಹೇಳಬಹುದಾ ಎಂದರೆ ಇಲ್ಲ. ಕಾರ್ಪೋರೇಷನ್ ಬ್ಯಾಂಕ್ ಖಾತೆ ನಂ 5201001354384 ನನ್ನ ಹೆಂಡತಿಗೆ ಸಂಬಂದಿಸಿರುತ್ತದೆ ಎಂದರೆ ಗೊತ್ತಿಲ್ಲ. ನಾನು 2 ನೇ ಪ್ರತಿವಾದಿಯ ಕಡೆಯಿಂದ 2 ಲಕ್ಷ ರೂ ನಗದು ರೂಪದಲ್ಲಿ ಪಡೆದು 2 ಲಕ್ಷ ರೂ ಹಣವನ್ನು ನನ್ನ ಹೆಂಡತಿಯಖಾತೆಗೆ ಜಮಾ ಮಾಡಿದ್ದರು ಸಹ ದಾವಾ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ಕಡೆ ಸಾಲದ ವ್ಯವಹಾರ ಮಾಡಿದ್ದು ಮಾರಾಟದ ವ್ಯವಹಾರ ಮಾಡಿಲ್ಲ ಆದರೂ ಸಹ ದಾವಾ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**